# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 925 (1078) |
| 2. | ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ) |
| 3. | ಉತ್ತರಿಸುವ ಸಚಿವರು | : | ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು. |
| 4. | ಉತ್ತರಿಸುವ ದಿನಾಂಕ | : | 12.03.2026. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ಸುಮಾರು 3,500 ಕ್ಕಿಂತ ಹೆಚ್ಚು ಪ್ರಕರಣಗಳು ಬಾಕಿ ಇರುವುದು ನಿಜವೇ; ಇದ್ದಲ್ಲಿ ಈ ಪ್ರಕರಣಗಳನ್ನು ವಿಲೆಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಮತ್ತು ಸದರಿ ಆಯೋಗದಲ್ಲಿ ಹೆಚ್ಚಿನ ತನಿಖಾ ಸಿಬ್ಬಂದಿಗಳನ್ನು ನೇಮಿಸಲು 2026-27ನೇ ಆಯವ್ಯಯದಲ್ಲಿ ಅನುದಾನ ಒದಗಿಸಲಾಗುತ್ತಿದೆಯೇ; | ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ 3,500 ಕ್ಕಿಂತ ಹೆಚ್ಚು ಪ್ರಕರಣಗಳು ಬಾಕಿ ಇರುವುದು ನಿಜ.<br><br>ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳನ್ನು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಕಾರ್ಯವಿಧಾನ) ವಿನಿಯಮಗಳು, 2020ರನ್ವಯ ಪರಿಶೀಲಿಸಿ, ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ದೂರುಗಳನ್ನು ಹಾಗೂ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡ ದೂರುಗಳನ್ನು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಕಾರ್ಯವಿಧಾನ) ವಿನಿಯಮಗಳು, 2020ರನ್ವಯ ಪರಿಶೀಲಿಸಲಾಗುತ್ತದೆ. ಪ್ರಕರಣಗಳನ್ನು ಪರಿಶೀಲಿಸಿ, ಸಂಬಂಧಪಟ್ಟ ಪೀಠಗಳ ಮುಂದೆ ಮಂಡಿಸಲಾಗುವುದು. ಸದರಿ ಪೀಠಗಳಲ್ಲಿ ದೂರು/ಪ್ರಕರಣಗಳನ್ನು ಪರಿಶೀಲಿಸಿ, ಸಂಬಂಧಪಟ್ಟ ಪ್ರಾಧಿಕಾರಗಳಿಂದ ವರದಿಗಳನ್ನು ಪಡೆಯಲು ಅಥವಾ ತನಿಖೆ ಅಗತ್ಯವಿದ್ದಲ್ಲಿ, ತನಿಖೆ ಕೈಗೊಂಡು ವರದಿಗಳನ್ನು ಸಲ್ಲಿಸಲು ಆಯೋಗದ ತನಿಖಾ ವಿಭಾಗಕ್ಕೆ ಸೂಚಿಸಲಾಗುವುದು. ಈ ಬಗ್ಗೆ, ದೂರುದಾರರು ಅರ್ಜಿದಾರರಿಗೆ ಮಾಹಿತಿ ನೀಡಲಾಗುವುದು. ಮತ್ತು ಕೆಲವೊಮ್ಮೆ ಪ್ರಮುಖ ಪ್ರಕರಣ ದೂರುಗಳನ್ನು ಪರಿಶೀಲಿಸಲು ಅಗತ್ಯವಿದ್ದಲ್ಲಿ ಸಂಬಂಧಪಟ್ಟ ಅರ್ಜಿದಾರರು ಸಂಬಂಧಿಸಿದ ಪ್ರಾಧಿಕಾರ/ವಿಧಿ ವಿಜ್ಞಾನ ತಜ್ಞರು/ಇತರೆ ವ್ಯಕ್ತಿಗಳು ಆಯೋಗದ ಮುಂದೆ ಖುದ್ದಾಗಿ ಹಾಜರಾಗಲು ಸಮನ್ಸ್ ಜಾರಿಗೊಳಿಸಲಾಗುವುದು.<br><br>ಪ್ರಕರಣಗಳಲ್ಲಿ ಸಂಬಂಧಪಟ್ಟ ಪ್ರಾಧಿಕಾರ/ವಿಧಿ ವಿಜ್ಞಾನ ತಜ್ಞರು/ ತನಿಖಾ ವಿಭಾಗದಿಂದ ವರದಿ ಸ್ವೀಕೃತವಾದ ನಂತರ ಸದರಿ ವರದಿಯನ್ನು ಸಂಬಂಧಪಟ್ಟ ಅರ್ಜಿದಾರರು/ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಲಾಗುವುದು. ವರದಿಯ ಮೇಲೆ ಅವರ ಅಭಿಪ್ರಾಯ ಸ್ವೀಕೃತವಾದ ನಂತರ ಸಂಬಂಧಪಟ್ಟ ಪೀಠಗಳಲ್ಲಿ ಪರಿಶೀಲಿಸಿ, ಪ್ರಕರಣಾನುಸಾರ ನೊಂದವರಿಗೆ ಪರಿಹಾರ ನೀಡಲು ಮತ್ತು ತಪ್ಪಿತಸ್ಥ ಸಾರ್ವಜನಿಕ ಅಧಿಕಾರಿ /ನೌಕರರ ವಿರುದ್ಧ ಕ್ರಮ ಕೈಗೊಳ್ಳಲು ಸೂಕ್ತ ಶಿಫಾರಸ್ಸುಗಳನ್ನು ಮಾಡಿ, ಪ್ರಕರಣಗಳನ್ನು ವಿಲೇ ಮಾಡಲಾಗುತ್ತಿದೆ. ಆಯೋಗದಲ್ಲಿ ಮಾಹೆಯಾನ ಸರಾಸರಿ 500 ಪ್ರಕರಣಗಳು ದಾಖಲಾಗುತ್ತಿದ್ದು, ಮಾಹೆಯಾನ ಸರಾಸರಿ 450 ರಿಂದ 500 ಪ್ರಕರಣಗಳು ವಿಲೇಯಾಗುತ್ತಿವೆ. ಮೇಲ್ಕಂಡ ಎಲ್ಲಾ ಪ್ರಕ್ರಿಯೆಗಳಿಗೆ ಸುಮಾರು 5 ರಿಂದ 6 ತಿಂಗಳ ಕಾಲಾವಕಾಶ ತೆಗೆದುಕೊಳ್ಳುವ ಕಾರಣ, ಸರಾಸರಿ 3,000 ದಿಂದ 3,500 ಪ್ರಕರಣಗಳು ಆಯೋಗದಲ್ಲಿ ಬಾಕಿ ಇರುತ್ತವೆ.<br>ಆಯೋಗದಲ್ಲಿ ಹೆಚ್ಚಿನ ತನಿಖಾ ಸಿಬ್ಬಂದಿಗಳನ್ನು ನೇಮಿಸಲು 2026-27ನೇ ಸಾಲಿನಲ್ಲಿ ಅನುದಾನವನ್ನು ಒದಗಿಸಿರುವುದಿಲ್ಲ. |

...2...

| | | |
|---|---|---|
| ಆ | ಕಾರಾಗೃಹಗಳಲ್ಲಿ ಅಕ್ರಮ ಬಂಧನ ಕಸ್ಟಡಿಯಲ್ಲಿ ಚಿತ್ರಹಿಂಸೆ ಮತ್ತು ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಕೆ.ಎಸ್.ಎಚ್.ಆರ್.ಸಿ.ಯ ತನಿಖಾ ವಿಭಾಗವನ್ನು ಬಲಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ತನಿಖಾ ವಿಭಾಗಕ್ಕೆ ಮಂಜೂರಾಗಿರುವ ಹುದ್ದೆಗಳ ಪೈಕಿ ಖಾಲಿ ಇರುವ ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್-05 ಹುದ್ದೆಗಳು, ಆರ್ಮ್ಸ್ ಪೊಲೀಸ್ ಕಾನ್ಸ್‌ಟೇಬಲ್- 04 ಹುದ್ದೆಗಳು ಮತ್ತು ಆರ್ಮ್ಸ್ ಪೊಲೀಸ್ ಕಾನ್ಸ್‌ಟೇಬಲ್/ ಆರ್ಮ್ಸ್ ಹೆಡ್ ಕಾನ್ಸ್ ಟೇಬಲ್ / ಡ್ರೈವರ್-02 ಹುದ್ದೆಗಳನ್ನು ಭರ್ತಿ ಮಾಡುವಂತೆ ಪೊಲೀಸ್ ಇಲಾಖೆಯನ್ನು ಕೋರಲಾಗಿರುತ್ತದೆ ಎಂದು ಆಯೋಗವು ತಿಳಿಸಿದೆ.<br><br>ಆಯೋಗದ ತನಿಖಾ ವಿಭಾಗದಲ್ಲಿ ಪ್ರಸ್ತುತ ಲಭ್ಯವಿರುವ ಸಿಬ್ಬಂದಿಗಳಿಂದಲೇ ಸಮರ್ಪಕವಾಗಿ ಕಾರ್ಯ ನಿರ್ವಹಿಸಲಾಗುತ್ತಿದೆ. |
| ಇ | ಇತ್ತೀಚಿನ ದಿನಗಳಲ್ಲಿ ಮಾನವ ಹಕ್ಕುಗಳು ಎಂಬ ಹೆಸರಿನಲ್ಲಿ ಅಧಿಕಾರಿಗಳಿಗೆ ಬೆದರಿಕೆ ಹಾಕುವ ನಕಲಿ ಸಂಘಟನೆಗಳು ಹೆಚ್ಚಾಗುತ್ತಿದ್ದು, ಈ ದುರುಪಯೋಗವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎಂಬುದರ ಬಗ್ಗೆ ತಿಳಿಸುವುದು? | ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಹೆಸರನ್ನು ಹೋಲುವಂತಹ ಹೆಸರನ್ನು ಬಳಕೆ ಮಾಡುತ್ತಿರುವ ಬಗ್ಗೆ, ಆಗಬಹುದಾದ ಹಾನಿಯನ್ನು ತಡೆಗಟ್ಟುವ ಬಗ್ಗೆ ನಿಟ್ಟಿನಲ್ಲಿ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಮಹಾನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರು, ಕರ್ನಾಟಕ ರಾಜ್ಯ ಮತ್ತು ಸಹಕಾರ ಸಂಘಗಳ ನಿಬಂಧಕರು ಇವರುಗಳನ್ನು ಕೋರಲಾಗಿದೆಯೆಂದು ಆಯೋಗವು ತಿಳಿಸಿದೆ.<br><br>ಆಯೋಗದ ಹೆಸರು ಮತ್ತು ಲೋಗೋ ಲಾಂಛನವನ್ನು ದುರ್ಬಳಕೆ/ದುರುಪಯೋಗ ಆಗದಂತೆ ತಡೆಯಲು ಕಟ್ಟುನಿಟ್ಟಿನ ಅಗತ್ಯ ಕ್ರಮಕೈಗೊಳ್ಳುವಂತೆ ರಾಜ್ಯದ ಎಲ್ಲಾ ಪೊಲೀಸ್ ಆಯುಕ್ತರು, ಎಲ್ಲಾ ವಲಯಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ಮಹಾನಿರೀಕ್ಷಕರ ಕಛೇರಿಯ ಸುತ್ತೋಲೆಯಲ್ಲಿ ಸೂಚಿಸಲಾಗಿರುತ್ತದೆ.<br><br>ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಕಛೇರಿಯಿಂದಲೂ ಸಹ ರಾಜ್ಯದ ಎಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ನೋಂದಣಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ. |

ಸಂಖ್ಯೆ: ಲಾ-ಹೆಚ್‌ಆರ್ ಎಮ್/26/2026

(ಹೆಚ್.ಕೆ. ಪಾಟೀಲ)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು, ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು